ಜೆಎಸ್‌ಎಸ್ ಮಹಾವಿದ್ಯಾಪೀಠ

# ಜೆಎಸ್‌ಎಸ್ ಮಹಿಳಾ ಕಾಲೇಜು

ಮೈಸೂರು ವಿಶ್ವವಿದ್ಯಾನಿಲಯಕ್ಕೆ ಸಂಯೋಜಿತ ಮತ್ತು ನ್ಯಾಕ್ ನಿಂದ `ಬಿ' ಮಾನ್ಯತೆ ಪಡೆದಿದೆ

**ಕೊಳ್ಳೇಗಾಲ - 571 440, ಚಾಮರಾಜನಗರ ಜಿಲ್ಲೆ**

☎: 08224-252149 🖷: 08224-256051 Email: jsscwk@gmail.com www.jsscwkgl.org

## ರಾಷ್ಟ್ರೀಯ ಸೇವಾ ಯೋಜನೆಯಿಂದ ಪರಿಪೂರ್ಣ ವ್ಯಕ್ತಿತ್ವ ನಿರ್ಮಾಣ ಸಾಧ್ಯ

### ಜೆಎಸ್‌ಎಸ್ ಮಹಿಳಾ ಕಾಲೇಜಿನಲ್ಲಿ ರಾಷ್ಟ್ರೀಯ ಸೇವಾ ಯೋಜನೆ ದಿನಾಚರಣೆ

ಕೊಳ್ಳೇಗಾಲ: 25-09-2018 ದೇಶಕಟ್ಟುವ, ದೇಶಭಕ್ತಿ ಮೆರೆವ, ಪರಿಪೂರ್ಣ ವ್ಯಕ್ತಿಗಳನ್ನಾಗಿ ವಿದ್ಯಾರ್ಥಿಗಳನ್ನು ಸಜ್ಜುಗೊಳಿಸುವ ಶಕ್ತಿ ರಾಷ್ಟ್ರೀಯ ಸೇವಾ ಯೋಜನೆಗೂ ಇದೆ ಎಂದು ಶ್ರೀ ಡಿ.ಜಿ.ವಿಷಕಂಠಮೂರ್ತಿ ಪ್ರಾಚಾರ್ಯರು ಜೆಎಸ್‌ಎಸ್ ನರ್ಸಿಂಗ್‌ಶಾಲೆ ಇವರು ಅಭಿಪ್ರಾಯಿಸಿದರು.

ಇಲ್ಲಿನ ಜೆಎಸ್‌ಎಸ್ ಮಹಿಳಾ ಕಾಲೇಜಿನಲ್ಲಿ ರಾಷ್ಟ್ರೀಯ ಸೇವಾ ಯೋಜನೆ ಘಟಕದ ವತಿಯಿಂದ "ರಾಷ್ಟ್ರೀಯ ಸೇವಾ ಯೋಜನೆ ದಿನಾಚರಣೆ' ಕಾರ್ಯಕ್ರಮವನ್ನು ಉದ್ಘಾಟಿಸಿ ಮಾತನಾಡಿದರು.

೧೯೬೯ ರಲ್ಲಿ ಮಹಾತ್ಮ ಗಾಂಧೀಜಿಯವರು ಹುಟ್ಟು ಹಾಕಿದ ರಾಷ್ಟ್ರೀಯ ಸೇವಾ ಯೋಜನೆ ಎಂದರೆ ಒಂದು ರಾಷ್ಟ್ರೀಯ ಚಳುವಳಿ. ಇಲ್ಲಿ ಭಾವೈಕ್ಯತೆ, ಜಾತ್ಯತೀತತೆ, ಸೇವೆಯ ಪರಿಕಲ್ಪನೆ, ಸಮಾನತೆ, ಸಾಮಾಜಿಕ ನ್ಯಾಯ, ಗ್ರಾಮೀಣ ಬದುಕಿನ ಪರಿಚಯ ಸೇರಿದಂತೆ ಹಲವು ಮಜಲುಗಳನ್ನು ಪ್ರಸ್ತುತ ಪಡಿಸುವುದೇ ಆಗಿದೆ. ಈ ಯೋಜನೆ ಶಿಕ್ಷಣಕ್ಕೆ ಒಂದು ಉತ್ತಮ ಅಡಿಪಾಯವಾಗಿದೆ ಎಲ್ಲರೂ ಸಕ್ರಿಯವಾಗಿ ತೊಡಗಿಸಿಕೊಳ್ಳಬೇಕು ಎಂದು ಕರೆ ನೀಡಿದರು.

ಅಧ್ಯಕ್ಷತೆ ವಹಿಸಿ ಮಾತನಾಡಿದ ಪ್ರಾಚಾರ್ಯ ಪ್ರೊ ಉಮೇಶ ಗುಣಾತ್ಮಕ ಮತ್ತು ಕ್ರಿಯಾತ್ಮಕ ಕಾರ್ಯಕ್ರಮಗಳನ್ನು ನೀಡುವ ಪರಿಸರ ಕಾಳಜಿ ವ್ಯಕ್ತಿತ್ವ ವಿಕಸನಕ್ಕೆ ರಾಷ್ಟ್ರೀಯ ಸೇವಾ ಯೋಜನೆ ಮೆಟ್ಟಲುಗಳಾಗಿ ವಿದ್ಯಾರ್ಥಿಗಳಲ್ಲಿ ಸಮಾಜಮುಖಿ ಕಾರ್ಯಕ್ರಮ ಸೇರಿದಂತೆ ಎಲ್ಲವನ್ನು ಕಲ್ಪಿಸಿಕೊಡುತ್ತದೆ, ವಿದ್ಯಾರ್ಥಿಗಳಲ್ಲಿ ಹಾಗೂ ಯುವ ಜನತೆಯಲ್ಲಿ ಮಾನವೀಯ ಮೌಲ್ಯಗಳನ್ನು ಬೆಳೆಸುತ್ತದೆ, ನೈತಿಕ ಶಕ್ತಿಯನ್ನು ತುಂಬುತ್ತದೆ, ಒಟ್ಟಾರೆ ಆದರ್ಶ ಬದುಕನ್ನು ಕಟ್ಟಿಕೊಳ್ಳಲು ಸಹಕಾರಿಯಾಗುತ್ತದೆ ಎಂದು ತಿಳಿಸುತ, ಯೋಜನೆಯ ಆರಂಭದಲ್ಲಿ ದೇಶಾದ್ಯಂತ ಕೇವಲ ೩೭ ವಿಶ್ವವಿದ್ಯಾನಿಲಯಗಳಲ್ಲಿ ಇದ್ದದ್ದು ಪ್ರಸ್ತುತ ೨೫೦ ವಿಶ್ವವಿದ್ಯಾನಿಲಯಗಳಲ್ಲಿ ೫೦ ಲಕ್ಷ ಸ್ವಯಂ ಸೇವಕರಿದ್ದು ಕರ್ನಾಟಕದಲ್ಲಿ ೫ ಲಕ್ಷ ಸ್ವಯಂ ಸೇವಕರಿರುವುದು ರಾಜ್ಯದ ಹೆಮ್ಮೆಯ ವಿಷಯ ಎಂದು ತಿಳಿಸಿ ರಾಷ್ಟ್ರೀಯ ಸೇವಾ ಯೋಜನೆ ಸುವರ್ಣ ಮಹೋತ್ಸವದ ಅಂಗವಾಗಿ ಮುಂದಿನ ದಿನಗಳಲ್ಲಿ ವಿಶೇಷ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳುವುದರ ಬಗ್ಗೆ ತಿಳಿಸಿದರು.

ರಾಷ್ಟ್ರೀಯ ಸೇವಾ ಯೋಜನೆ ಕಾರ್ಯಕ್ರಮಾಧಿಕಾರಿ ಪ್ರೊ.ಬಸವರಾಜು, ರಾಷ್ಟ್ರೀಯ ಸೇವಾ ಯೋಜನೆ ಸಮಿತಿ ಸದಸ್ಯರಾದ ಶ್ರೀಮತಿ ಸ್ಮಿತಾ, ಪ್ರೊ.ಮಂಜುನಾಥ ಬಿ ಕಾರ್ಯಕ್ರಮದಲ್ಲಿ ಉಪಸ್ಥಿತರಿದ್ದರು.

ರಾಷ್ಟ್ರೀಯ ಸೇವಾ ಯೋಜನೆ ದಿನಾಚರಣೆ ಕುರಿತು ಶ್ರೀ ಡಿ.ಜಿ ವಿಷಕಂಠಮೂರ್ತಿ, ಪ್ರಾಚಾರ್ಯ, ನರ್ಸಿಂಗ್‌ಶಾಲೆ ರವರು ಮಾತನಾಡುತ್ತಿರುವುದು, ಚಿತ್ರದಲ್ಲಿ ಶ್ರೀ ಡಿ.ಜಿ ವಿಷಕಂಠಮೂರ್ತಿ, ಪ್ರಾಚಾರ್ಯ ಪ್ರೊ ಉಮೇಶ ರಾಷ್ಟ್ರೀಯ ಸೇವಾ ಯೋಜನೆ ಕಾರ್ಯಕ್ರಮಾಧಿಕಾರಿ ಶ್ರೀ ಬಸವರಾಜು, ಶ್ರೀ ಮಂಜುನಾಥ ಬಿ, ಶ್ರೀಮತಿ ಸ್ಮಿತಾ ರವನ್ನು ಕಾಣಬಹುದು.




ರಾಷ್ಟ್ರೀಯ ಸೇವಾ ಯೋಜನೆ ದಿನಾಚರಣೆಯಲ್ಲಿ ಅಧ್ಯಕ್ಷೀಯ ನುಡಿ ನೀಡುತ್ತಿರುವ ಪ್ರಾಚಾರ್ಯ ಪ್ರೊ ಉಮೇಶ್ ಹಾಗೂ ಪ್ರಾಚಾರ್ಯ ಶ್ರೀ ಡಿ.ಜಿ ವಿಷಕಂಠಮೂರ್ತಿ, ರಾಷ್ಟ್ರೀಯ ಸೇವಾ ಯೋಜನೆ ಕಾರ್ಯಕ್ರಮಾಧಿಕಾರಿ ಶ್ರೀ ಬಸವರಾಜು, ಶ್ರೀ ಮಂಜುನಾಥ ಬಿ, ಶ್ರೀಮತಿ ಸ್ಮಿತಾ ರವನ್ನು ಕಾಣಬಹುದು.




ಕಾರ್ಯಕ್ರಮದಲ್ಲಿ ಉಪಸ್ಥಿತರಿರುವ ಅಧ್ಯಾಪಕರು ಹಾಗೂ ರಾಷ್ಟ್ರೀಯ ಸೇವಾ ಯೋಜನೆ ಸ್ವಯಂ ಸೇವಕಿಯರು

